**ಎದೆ ಭಾರದಿಂದ ಅಲ್ಲಿಂದ ಹೆಜ್ಜೆ ಕಿತ್ತಿಟ್ಟೆ. ನನ್ನ ನೆರಳು ಮಾತ್ರ ನನ್ನೊಂದಿಗೆ ತೆವಳುತ್ತಾ ಬರುತ್ತಿತ್ತು. ರೇವತಿಗಾಗಿ ನನ್ನ ಕಣ್ಣುಗಳು ಹುಡುಕಾಡಿದವು. ರೇವತಿ ಕಾಣಿಸಲಿಲ್ಲ! ಕಳವಳದಿಂದ ಹಿಂದಿರುಗಿ ನೋಡಿದೆ.**

ವರುಷ. ನನಗೆ 'ರೇವತಿ' ಎನ್ನುವ ಹೆಸರೇ ಇಷ್ಟವಾಯಿತು. ಬೇಸಗೆಯಲ್ಲಿ ಕಾದು ಹಂಚಿನಂತಾದ ಭೂಮಿಯ ಮೈಯನ್ನು ತಂಪಾಗಿಸುವ ವರುಷದ ಮೊದಲ ಮಳೆ ರೇವತಿ. ನಮ್ಮಲ್ಲಿ ಮಳೆಗಾಲ ಆರಂಭವಾಗುವುದೇ 'ರೇವತಿ' ಮಳೆಯ ಮೂಲಕ. ಹೀಗೆ 'ರೇವತಿ' ಭೂಮಿಗೆ ತಾಕುವ ಎಲ್ಲ ಮಳೆಗಳ ತಾಯಿ. ತನ್ನ ರೋಗಿಷ್ಟ ತಾಯಿಗೆ ಈಗ ಅವಳೇ ಆಸರೆ.

ರೇವತಿಯ ಕಣ್ಣಿನಲ್ಲಿ ನೀರು ಜಿನುಗುತ್ತಿತ್ತು. 'ಈ ಭೂಮಿಯನ್ನು ಕಣ್ಣೀರು ತೋಯಿಸಿದಷ್ಟು ಇನ್ಯಾವ ಮಳೆಯೂ ತೋಯಿಸಿಲ್ಲ! ಹಾಗೆಯೇ ಕಣ್ಣೀರಿನಿಂದ ಯಾವ ಸಮಸ್ಯೆಯೂ ಪರಿಹಾರವಾಗಿದ್ದನ್ನು ಜಗತ್ತು ನನಗೆ ತೋರಿಸಿಲ್ಲ...' ಎಂದು ಹೇಳಿದೆ. ನನ್ನ ಮಾತುಗಳು ಆ ಎಳೆಯ ಬಾಲಕಿಯ ಅರಿವಿಗೆ ಎಷ್ಟು ತಾಕಿತೋ ನನಗೆ ತಿಳಿಯಲಿಲ್ಲ! ಮೃದುವಾಗಿ ಅವಳ ಕೈ ಹಿಡಿದೆ. ಅಧೀರತೆಯಿಂದ ಅವಳ ಕೈ ನಡುಗುತ್ತಿತ್ತು!

★★★

ನಾನು ನೋಡನೋಡುತ್ತಿದ್ದಂತೆ ಆ ದಿನ ಬಹುಬೇಗನೆ ರಸ್ತೆಗಳೆಲ್ಲಾ ಖಾಲಿಯಾಗಿದ್ದವು. ಎಲ್ಲವೂ ಸ್ತಬ್ಧವಾಗಿತ್ತು. ಕಟ್ಟಡಗಳೆಲ್ಲ ಚಲಿಸದೆ ಹಾಗೆಯೇ ನಿಂತಿದ್ದವು. ಜನರು ಆ ಮೃತ ನಗರವನ್ನು ತೊರೆದು ಹೋಗಲು ನೀರು ಹರಿಯುವಂತೆ ಸಿಕ್ಕ ಸಿಕ್ಕ ಕಡೆ ನುಸುಳುತ್ತಾ ನುಗ್ಗುತ್ತಿದ್ದರು. ಹಗಲು ಬೆಳಗುತ್ತಿದ್ದರೂ ನಡೆಯುವ ದಾರಿಗಳಿಗೆಲ್ಲಾ ಕತ್ತಲು ಕವಿದಿತ್ತು. ನಾನು ಕೂಲಿ ಮಾಡುತ್ತಿದ್ದ ಕಟ್ಟಡ ಕಟ್ಟುವ ಕೆಲಸವನ್ನೆಲ್ಲಾ ಏಕದಂ ನಿಲ್ಲಿಸಿಬಿಟ್ಟರು! ಏಕೆ? ಏನು? ಎಂದು ಕೇಳುವುದೊರಳಗಾಗಿ ಮೇಸ್ತ್ರಿ ನಮ್ಮನ್ನೆಲ್ಲಾ ಬೀದಿಗೆ ನೂಕಿದ್ದ. ನನ್ನೊಂದಿಗೆ ಕೆಲಸ ಮಾಡುತ್ತಿದ್ದ ನೂರಾರು ಜನ ಕೂಲಿಗಳು ಕಾರಣ ತಿಳಿಯದೆ ಕೈಲಿದ್ದ ಕೆಲಸ ಕಳೆದುಕೊಂಡು ಬೀದಿಗೆ ಬಿದ್ದರು. ನಾನು ರೇವತಿಯ ಕೈಹಿಡಿದುಕೊಂಡು ನಡುಬೀದಿಗೆ ಬಂದೆ. ಹೋಗಲು ನನ್ನದೆನ್ನುವ ಯಾವ ಊರೂ ನನಗೆ ಇರಲಿಲ್ಲ! ನನ್ನದೆನ್ನುವ ಬಳಗವೂ ಇರಲಿಲ್ಲ! ಈ ಜಗತ್ತಿನಲ್ಲಿ ನನ್ನದು ಎನ್ನುವುದು ಇದ್ದದ್ದು ಒಂದೇ; ಅದು ರೇವತಿ ಮಾತ್ರ! ನನ್ನ ಉಸಿರು, ನನ್ನ ಬದುಕು ಎಲ್ಲಾ ಅವಳೇ ಆಗಿದ್ದಳು.

ನಮ್ಮ ಕಣ್ಣೆದುರೇ ಎಲ್ಲವೂ... ಒಂದೊಂದೇ ಭೂಮಿಗೆ ಬಿದ್ದು ಮಣ್ಣಾಗಿದ್ದವು. ನನ್ನ ಜೊತೆಯ ಕೂಲಿಕಾರ ಕುಟುಂಬದವರೆಲ್ಲರೂ ತಮ್ಮ ಭಾರದ ಜೊತೆ, ತಮ್ಮ ಕುಟುಂಬದ ಭಾರವನ್ನೂ ಹೊತ್ತು ಬರಿಗಾಲಲ್ಲಿ ನಡೆಯುತ್ತಿದ್ದಾರೆ! ನೂರಾರು ಮೈಲಿಗಳಾಚೆಯ ಊರುಗಳಿಂದ ಬಂದಿದ್ದ ಅವರನ್ನು ನಿರ್ದಾಕ್ಷಿಣ್ಯವಾಗಿ ಆಚೆಗೆ ನೂಕಿದ್ದಾರೆ. ಅವರನ್ನು ಉಳಿಸಿಕೊಳ್ಳಲು ಯಾವ ಕಾರಣವೂ ಇರಲಿಲ್ಲ ಆ ನಗರಕ್ಕೆ. ಬೆನ್ನಮೇಲೆಯೇ ಕುಳಿತ್ತಿದ್ದ ಹಸಿವು – ಸಾವನ್ನು ಲೆಕ್ಕಿಸದೆ ಮರುಭೂಮಿಯಂಥ ಆ ನಗರದ ರಸ್ತೆಯ ಮೇಲೆ ನೆತ್ತರು ತೊಟ್ಟಿಕ್ಕುವ ಪಾದಗಳಿಂದ ಅವರು ನಡೆದರು... ನಾನೂ ಮತ್ತು ರೇವತಿ ಕೂಡ ಎಲ್ಲಿಗೆ ಹೋಗುವುದು ಎನ್ನುವುದನ್ನೇ ತಿಳಿಯದೆ ಅವರ ಹಿಂದೆ ನಡೆಯುತ್ತಿದ್ದೆವು.